ಉಡುಪಿ ಮುನಿಸಿಪಾಲಿಟಿಯ ಹೊರಗಿನ ಹಳ್ಳಿಗಳಲ್ಲಿ ಹಾಗೂ ತೀರ ಪ್ರದೇಶದ ಹಳ್ಳಿಗಳಲ್ಲಿ ಕುಡಿಯುವ ನೀರಿನ ಕೊರತೆ.

೧೩೬. ಶ್ರೀಮತಿ ಮನೋರಮಾ ಮಧ್ವರಾಜ್ (ಉಡುಪಿ).—ಮಾನ್ಯ ಗ್ರಾಮೀಣ ಅಭಿವೃದ್ಧಿ ಪಂಚಾಯತ್ ರಾಜ್ ಹಾಗೂ ವಕ್ಫ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಉಡುಪಿ ಮುನಿಸಿಪಾಲಿಟಿಯ ಹೊರಗಿನ ಹಳ್ಳಿಗಳಲ್ಲಿ ಹಾಗೂ ತೀರ ಪ್ರದೇಶದ ಹಳ್ಳಿಗಳಲ್ಲಿ ಕುಡಿಯುವ ನೀರಿನ ಅತೀವ್ರ ಕೊರತೆಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಸ್ವರ್ಣ ೨ನೇ ಹಂತದ ಕೆಲಸವನ್ನು ಸರ್ಕಾರವು ಕೂಡಲೆ ಮಂಜೂರು ಮಾಡುವುದೇ ?

ಇ) ಹಾಗಿದ್ದಲ್ಲಿ ಅದಕ್ಕೆ ಕಾರಣಗಳೇನು ?

ಶ್ರೀ ಅಬ್ದುಲ್ ನಜೀರ್ ಸಾಬ್ (ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು).—

ಅ) ಇಲ್ಲ.

ಆ) ಇಲ್ಲ.

ಇ) ಸ್ವರ್ಣ ಮೊದಲನೇ ಹಂತವನ್ನು ಉಡುಪಿ ಹಾಗೂ ಮಲ್ಪೆ ಟೌನ್‌ಗಳಿಗೆ ಕುಡಿಯುವ ನೀರನ್ನು ಒದಗಿಸುವ ಸಲುವಾಗಿ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳ ಚರಂಡಿ ಮಂಡಳಿಯವರು ಕಾರ್ಯಗತ ಗೊಳಿಸಿರುತ್ತಾರೆ. ಉಡುಪಿ ತಾಲ್ಲೂಕಿನ ಗ್ರಾಮಗಳಿಗೆ ಕುಡಿಯುವ ನೀರನ್ನು ಒದಗಿಸುವಲ್ಲಿ ಸ್ವರ್ಣ ಎರಡನೇ ಹಂತವನ್ನು ಮಂಜೂರು ಮಾಡುವ ಪ್ರಸ್ತಾವನೆ ಇರುವುದಿಲ್ಲ.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಲ್ಲಿ ನಿವೇಶನಗಳ ಹಂಚಿಕೆ ಬಗ್ಗೆ.

೩೯೯. ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಆಥಣಿ).—ಮಾನ್ಯ ವಾರ್ತಾ, ಪ್ರವಾಸೋದ್ಯಮ ಹಾಗೂ ಬೆಂಗಳೂರು ಅಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಂಗಳೂರು ನಗರದಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ೧೯೮೫ ರಿಂದ ಅಭಿವೃದ್ಧಿ ಪಡಿಸಿದ ಹೊಸ ಬಡಾವಣೆಗಳ ಸಂಖ್ಯೆ ಮತ್ತು ಹಂಚಿಕೆ ಮಾಡಿದ ನಿವೇಶನಗಳ ಸಂಖ್ಯೆ ಎಷ್ಟು ?

ಆ) ಇನ್ನೂ ಹಂಚಿಕೆ ಮಾಡಬೇಕಾದ ನಿವೇಶನಗಳೆಷ್ಟು ? (ಬಡಾವಣೆವಾರು ವಿವರ ನೀಡುವುದು)

ಇ) ಇವುಗಳ ಪೈಕಿ ಮೂಲೆ ನಿವೇಶನಗಳೆಷ್ಟು ?

ಈ) ಪ್ರಾಧಿಕಾರವು ನಿರ್ಮಿಸಿದ ಪ್ರತಿಯೊಂದು ಬಡಾವಣೆಯಲ್ಲಿ ಖಾಲಿ ಇರುವ ವಾಣಿಜ್ಯ ಸೌಲಭ್ಯ ನಿವೇಶನಗಳ ಸಂಖ್ಯೆ ಎಷ್ಟು ?

ಉ) ಪ್ರಾಧಿಕಾರವು ನಿರ್ಮಿಸಿದ ಪ್ರತಿ ಬಡಾವಣೆಯಲ್ಲೂ ಇನ್ನೂ ಖಾಲಿ ಉಳಿದಿರುವ ನಿವೇಶನಗಳ ಸಂಖ್ಯೆ ಎಷ್ಟು ?

ಊ) ನಿಗದಿತ ಅವಧಿಯಲ್ಲಿ ಮನೆ ಕಟ್ಟದೆ ಇರುವ ಹಂಚಿಕೆದಾರರ ವಿರುದ್ಧ ಕೈಗೊಂಡ ಕ್ರಮವೇನು ?

ಋ) ಪ್ರಾಧಿಕಾರದಲ್ಲಿ ನಿವೇಶನ ಹಂಚಿಕೆಗಾಗಿ ಬಾಕಿ ಉಳಿದಿರುವ ಅರ್ಜಿಗಳೆಷ್ಟು ? ಅಂಥಹ ಅರ್ಜಿದಾರರಿಂದ ಸಂಗ್ರಹಿಸಿದ ಒಟ್ಟು ಹಣವೆಷ್ಟು ?

ಶ್ರೀ ಎಂ. ಪಿ. ಪ್ರಕಾಶ್ (ಬೆಂಗಳೂರು ಅಭಿವೃದ್ಧಿ ವಾರ್ತಾ, ಪ್ರವಾಸೋದ್ಯಮ ಸಚಿವರು).— ಅ)

ವರ್ಷ	ಹೊಸ ಬಡಾವಣೆಗಳ ಸಂಖ್ಯೆ	ಹಂಚಿಕೆಯಾದ ನಿವೇಶನಗಳ ಸಂಖ್ಯೆ
೧೯೮೫	೨	೩,೧೫೦
೧೯೮೬	೪	೧,೯೫೫
೧೯೮೭	೪	೧೫,೧೦೨
ಒಟ್ಟು	೧೦	೨೦,೧೬೬

ಆ) ಇಲ್ಲ.

ಇ) ೩೨೨೪ ನಿವೇಶನಗಳು.

ಈ) ೭೪.

ಉ) ಇದುವರೆಗೂ ಹಳೆಯ ಬಡಾವಣೆಗಳಲ್ಲಿ ಮನೆ ಕಟ್ಟದೆ ಖಾಲಿ ಇರುವ ೩,೫೯೭ ನಿವೇಶನಗಳನ್ನು ಗುರುತಿಸಲಾಗಿದ್ದು, ಸಮೀಕ್ಷೆ ಕಾರ್ಯ ಮುಂದುವರೆದಿದೆ.

ಊ) ೩,೫೯೭ ಜನರಿಗೆ ಷೋಕಾಸ್ ನೋಟೀಸ್ ನೀಡಲಾಗಿದೆ. ವಿಚಾರಣೆ ಮುಂದುವರಿದಿದೆ.

ಋ) ಬಾಕಿ ಇಲ್ಲ. ನಿವೇಶನ ಹಂಚಿಕೆಯ ಪ್ರತಿಯೊಂದು ಪ್ರಕಟಣೆಯನ್ನೂ ಪ್ರತ್ಯೇಕವಾಗಿ ಪರಿಗಣಿಸಲಾಗುತ್ತದೆ. ಅರ್ಜಿದಾರರ ವಂತಿ ಅಲ್ಲಿಗೇ ಕೊನೆಗೊಳ್ಳುತ್ತದೆ ಮತ್ತು ಪ್ರಾರಂಭಿಕ ಠೇವಣಿಯನ್ನು ಹಿಂದಿರುಗಿಸಲಾಗುತ್ತದೆ. ನಿವೇಶನ ದೊರೆಯದೇ ಇದ್ದ ಹಂಚಿಕೆದಾರರಿಂದ ಮುಂದಿನ ಪ್ರಕಟಣೆಗೆ ಅನುಗಣನವಾಗಿ ಮತ್ತೆ ಅರ್ಜಿ ಸಲ್ಲಿಸಬೇಕಾಗುತ್ತದೆ.

ಇತ್ತೀಚಿನ ಪ್ರಕಟಣೆಗಳನ್ವಯ ಸಂಗ್ರಹವಾದ ಪ್ರಾರಂಭಿಕ ಠೇವಣಿಯ ವಿವರ ಈ ಕೆಳಕಂಡಂತಿವೆ.

		ಅರ್ಜಿ ಸಂಖ್ಯೆ
೧ ಡಿಸೆಂಬರ್ ೮೭ರ ಪ್ರಕಟಣೆ ...		೭೭,೯೫೭
೨ ಜನವರಿ ೮೭ರ ಪ್ರಕಟಣೆ ...		೭೭,೩೪೬
೩ ಏಪ್ರಿಲ್ ೮೭ರ ಪ್ರಕಟಣೆ ...		೩,೯೪೨
೪ ಜುಲೈ ೮೭ರ ಪ್ರಕಟಣೆ ...		೮೨,೧೨೨

ಸಂಗ್ರಹವಾದ ಒಟ್ಟು ಪ್ರಾರಂಭಿಕ ಠೇವಣಿ—೩೩,೩೩,೧೨,೯೫೭ ರೂ.ಗಳು.

ದಿನಾಂಕ ೨೫-೧-೮೮ರ ಚುಕ್ಕೆಗುರುತಿನ ಪ್ರಶ್ನೋತ್ತರಗಳ ಪಟ್ಟಿ.

ಬಳ್ಳಾರಿಯಲ್ಲಿ ಪ್ರಥಮ ದರ್ಜೆ ಮಹಿಳಾ ವಿದ್ಯಾಲಯಕ್ಕಾಗಿ ಕಟ್ಟಡ.

೨೪೧. ಶ್ರೀ ಎಂ. ರಾವಂಪ್ಪ (ಬಳ್ಳಾರಿ).—ಮಾನ್ಯ ಉನ್ನತ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬಳ್ಳಾರಿಯಲ್ಲಿ ಸರ್ಕಾರದ ಪ್ರಥಮದರ್ಜೆ ಕಾಲೇಜಿಗೆ ಕಟ್ಟಡ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಆ) ಹಾಗಿದ್ದಲ್ಲಿ, ಕಟ್ಟಡ ನಿರ್ಮಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮ ?